# ವರ್ಣ ಕೌತುಕ

ಕಳೆದ ಶತಮಾನದ ಐದನೆಯ ದಶಕ. ಮೈಸೂರಿನ ದಸರಾ ವಸ್ತುಪ್ರದರ್ಶನದ ಅಂಗವಾಗಿ ಮಹಾನ್ ಕಲಾವಿದ ರೋರಿಕ್ ಮಹಾಶಯನ ಹಿಮಾಲಯವಾಸಿ ಭವ್ಯಚಿತ್ರಗಳ ಪ್ರದರ್ಶನವೊಂದು ಏರ್ಪಾಡಾಗಿತ್ತು. ಆ ಚಿತ್ರಗಳನ್ನು ಪ್ರತಿದಿನ ಕುವೆಂಪು ಅವರು ಹೋಗಿ ನೋಡುತ್ತಿದ್ದರು. ಒಂದು ದಿನ ಕುವೆಂಪು ಚಿತ್ರಗಳನ್ನು ನೋಡುತ್ತಿದ್ದರು, ಅಲ್ಲಿದ್ದ ಒಬ್ಬ ವ್ಯಕ್ತಿ 'ಅಲ್ಲೂ ಚಿತ್ರಗಳಿವೆ' ಎಂದು ಹೇಳಿದ. ಆಗ ಅವರು, 'ಅಲ್ಲೂ ಹೋಗ್ಬೇಕು, ಇಲ್ಲೂ ಹೋಗ್ಬೇಕು, ಎಲ್ಲೂ ಹೋಗ್ಬೇಕು' ಎಂದು ಮಾರ್ಮಿಕವಾಗಿ ಹೇಳಿ ಹಿಂತಿರುಗಿದರಂತೆ. ಮಹಾಕವಿಯೊಬ್ಬ, ಮಹಾಕಲಾವಿದನ ಕೃತಿಯನ್ನು ನೋಡುವ ಒಂದು ಬಗೆ ಇಲ್ಲಿ ಕಾಣುತ್ತದೆ. 'ಕಲೆಯನಲ್ಲದೆ ಶಿಲ್ಪಿ ಶಿಲೆಯನೇಂ ಸೃಷ್ಟಿಪನೆ' ಎಂದು ಬಲು ಮಾರ್ಮಿಕವಾಗಿ ಕುವೆಂಪು ಅವರೇ ಒಂದೆಡೆ ಹೇಳಿದ್ದುಂಟು.

ಫ್ಲಾರೆನ್ಸಿನ 'ಪತಿಗ್ಯಾಲರಿ'ಯಲ್ಲಿ 'ಅಡೋರೇಶನ್ ಆಫ್ ದಿ ಹೋಲಿ ಚೈಲ್ಡ್' (ಶಿಶು ಕ್ರಿಸ್ತವಂದನೆ) ಎಂಬ ಸುಂದರವಾದ ಚಿತ್ರ ಉಂಟಷ್ಟೆ. ಆ ಚಿತ್ರವು ಬಲು ಪ್ರಾಚೀನವಾದುದು. ಅದರಲ್ಲಿ ತಳದಿಂದ ತುದಿಯವರೆಗೆ ಕ್ರಿಸ್ತನ ತಾಯಿಯ ಭವ್ಯಚಿತ್ರವನ್ನು ಕಲಾವಿದ ಒಡಮೂಡಿಸಿದ್ದಾನೆ. ಅದೊಂದು ಭವ್ಯಮೂರ್ತಿ. ಬಾಗಿರುವ ಮುಖದಲ್ಲಿ ಗಾಢವಾದ ತಲ್ಲೀನ ಭಾವವುಂಟು. ನೆಲದವರೆಗೆ ಹಾಸಿರುವ ಮಂದನೀಲಿಯ ಹಸುರುಕಾಂತಿಯ ಸುಂದರ ಗೌನು. ಈ ಬಣ್ಣವು ಚಿತ್ರಕ್ಕೆ ವೈಭವವನ್ನು ತಂದುಕೊಟ್ಟಿದೆ. ಕ್ರಿಸ್ತಮಾತೆಯ ತಲೆಯ ಮೇಲೆಲ್ಲಾ ಅದೇ ಬಣ್ಣದ ಬೆಳಗು, ಮುಂಜಾವಿನ ತಿಳಿಮುಗಿಲು. ಹಿಂದೆ ತುಸುದೂರದಲ್ಲಿ ಎಡಬಲದ ಕಿರುಗುಡ್ಡಗಳ ನಡುವೆ ಕೊಳವೊಂದುಂಟು. ಆ ಭವ್ಯಚಿತ್ರದ ಆಚೆ–ಈಚೆಯ ಮೂಲೆಯಲ್ಲಿ ಎರಡು ಚಿಕ್ಕ ಶಿಶುಗಳು. ಆಕೆಯ ಉದರದಲ್ಲಿ ಲೋಕೋತ್ತರವಾದ ಶಿಶು ಅವತರಿಸಿದುದಕ್ಕೆ ಆ ಕುಮಾರಿಯ ಅಂತರಂಗದಲ್ಲಿ ಅನಿರ್ವಚನೀಯವಾದ ಧನ್ಯತೆ ಉಂಟಾಗಿದೆ. ಆಕೆಗೊ 'ತನ್ನ ಮಗು' ಎಂಬ ವಾತ್ಸಲ್ಯ ಬೇರೆ. ಈ ಧನ್ಯತೆ ಮತ್ತು ವಾತ್ಸಲ್ಯದ ತೂಗುಭಾವವನ್ನು ಕಲಾವಿದ ಅಪ್ರತಿಮವಾಗಿ ಚಿತ್ರಿಸಿದ್ದಾನೆ. ಇದು ಒಂದು ಕಡೆ ಆತ್ಮಭಾವದ ಹರ್ಷ ವಿಸ್ಮಯ; ಮತ್ತೊಂದು ಕಡೆ ಜೀವಭಾವದ ಅಕ್ಕರತೆ! ಹೀಗೆ, ಈ ಚಿತ್ರವು ಮರ್ತ್ಯ–ಅಮರ್ತ್ಯಗಳ ಮಧುರಮಿಲನದ ಜೀವಕಳೆಯಾಗಿದೆ. ಈ ಚಿತ್ರದಲ್ಲಿ 'ಮಂದನೀಲಿಯ ಹಸಿರುಕಾಂತಿ'ಯು ನೋಡುವವರ ಕಣ್ಣಿಗೆ ಹಬ್ಬವನ್ನು ಉಂಟು ಮಾಡುತ್ತಿದೆ. ಇದು ಉದ್ದೀಪನಕರವಾದ ಬಣ್ಣ. ಈ ಬಣ್ಣವು ಚಿತ್ರದ ಮುಕ್ಕಾಲು ಪ್ರದೇಶವನ್ನೆಲ್ಲಾ ವ್ಯಾಪಿಸಿಕೊಂಡಿದೆ. ಈ ಬಣ್ಣಕ್ಕೆ ಆಧ್ಯಾತ್ಮಿಕ ಅರ್ಥದ ನೆಲೆಸುಗಳುಂಟು. ಇದು ಅಂತರಂಗದ ಆತ್ಮ ಧನ್ಯತೆಯನ್ನು ಸಾಂಕೇತಿಕವಾಗಿ ಸೂಚಿಸುತ್ತದೆ.

ಆ ಚಿತ್ರದ ಎಡ–ಬಲಗಳಲ್ಲೂ ಅದೇ ಸನ್ನಿವೇಶದ ಹತ್ತಾರು ಚಿತ್ರಗಳುಂಟು. ಅವೆಲ್ಲವುಗಳಲ್ಲಿಯೂ 'ಕ್ರಿಸ್ತಮಾತೆ'ಯ ಮೈಮೇಲೆ ಮಂದನೀಲಿಯ ಹಸುರುಕಾಂತಿ ಇದೆ. ಅದರ ಒಳಗಡೆ ಕೆಂಪು ಇಲ್ಲವೆ ಗುಲಾಬಿ ಬಣ್ಣದ ನಿಲುವಂಗಿ ರೂಪುಗೊಂಡಿದೆ. ಜೀವನದಲ್ಲಿ ಆತ್ಮತೃಪ್ತಿ ಹುಟ್ಟಿದಾಗಲೇ ಅಂತರಂಗದಲ್ಲಿ ಈ ಬಣ್ಣ ಮೋಡಿಮಾಡುತ್ತದೆ. ಪ್ರತಿಬಣ್ಣಕ್ಕೂ ಸಾಂಕೇತಿಕವಾದ ಅರ್ಥದ ಪದರುಗಳುಂಟಷ್ಟೆ. ಹೀಗಾಗಿ, ಮಂದನೀಲಿಯ ಹಸುರುಕಾಂತಿಗೂ ಸಾಂಕೇತಿಕ ಅರ್ಥವಿದೆ. ನಮ್ಮ ದೇಶದ ನವಿಲಿನ ಚಿತ್ರವನ್ನು ನೆನಪಿಸಿಕೊಳ್ಳಿ. ಗಂಡು ನವಿಲುಗಳ ಗರಿಯಲ್ಲಿರುವ ನೀಲಿಕಾಂತಿಯು ಆಧ್ಯಾತ್ಮಿಕ ಸ್ಪರ್ಶವನ್ನು ತಂದುಕೊಡುತ್ತದೆ. ಲೌಕಿಕ ಮನಃಕ್ಲೇಶದ ನಿವಾರಣೆ ನೀಲಿಕಾಂತಿಯಿಂದಲೂ ಆಗಬಹುದು. ನಮ್ಮ ಶ್ರೀಕೃಷ್ಣ ಶ್ಯಾಮಲವರ್ಣದವನು. ಅವನ ತಲೆಯಲ್ಲಿ ನವಿಲಿನ ಗರಿಯುಂಟು. ಅವನ ವಸ್ತ್ರ ಪೀತವರ್ಣದ್ದು. ಶ್ರೀಕೃಷ್ಣ ದೇವಾವತಾರ; ಕ್ರಿಸ್ತಮಾತೆ ಭಕ್ತಳೆಂಬುದನ್ನು ಈ ಸಂದರ್ಭದಲ್ಲಿ ನೆನಪುಮಾಡಿಕೊಳ್ಳಬಹುದು. ಶ್ರೀಕೃಷ್ಣನಿಗೆ ಅಪರಂಪಾರ ಮುಗಿಲಿನ ನೀಲಿಯು ತಕ್ಕ ದ್ಯೋತಕವೇ ಸರಿ. ಕ್ರಿಸ್ತಮಾತೆಗೆ ಇರುವ ಬಣ್ಣ ಅತ್ತ ನೀಲಿಯೂ ಅಲ್ಲ; ಹಸುರೂ ಅಲ್ಲ. ಅದು ಎರಡೂ ಕೂಡಿದ್ದು.

ಪ್ರಾಚೀನ ಕಾಲದಿಂದ ನಮ್ಮಲ್ಲಿ ಬಣ್ಣಗಳ ತಯಾರಿಕೆ ಇತ್ತು. ಪ್ರಾಕೃತಿಕ ವಸ್ತುಗಳಿಂದ ಬಣ್ಣಗಳನ್ನು ತಯಾರಿಸುತ್ತಿದ್ದರು. ಅವುಗಳನ್ನು ಬಟ್ಟೆಗಳಿಗೂ ಬಳಸುತ್ತಿದ್ದರು; ಚಿತ್ರಗಳಿಗೂ ಬಳಸುತ್ತಿದ್ದುದುಂಟು. ಹಸುರು ಬಣ್ಣ ಸಂಪದಭಿವೃದ್ಧಿಯ ಸಂಕೇತವಾದರೆ; ನೀಲಿಯು ಆಧ್ಯಾತ್ಮಿಕ ಸಂಸ್ಪರ್ಶತೆಯ ಸಂಕೇತ ಎನಿಸಿತ್ತು. ವಿಷ್ಣು ಸಂಬಂಧವಾದ ದೈವತ್ವಕ್ಕೆ ಉಡಿಸುವ ಬಟ್ಟೆ, ಮೈಗೆ ಬಳಸುವ ಬಣ್ಣ 'ನೀಲಿ' ಎಂಬುದನ್ನು ನಾವು ಗಮನಿಸಬೇಕು. ಕ್ರಿಸ್ತಮಾತೆಯ ಚಿತ್ರದಲ್ಲಿ ಅತ್ತ ನೀಲಿ; ಇತ್ತ ಹಸುರು ಎರಡರ ಮಿಶ್ರಣವೂ ಉಂಟು. ಇದು ಮರ್ತ್ಯಅಮರ್ತ್ಯಗಳ ಸಂಲಗ್ನ ಸ್ಥಿತಿಯನ್ನು ಸೂಚಿಸುತ್ತದೆ. ಪ್ರಾಚೀನಕಾಲದ ಸಾಧುಸಂತರು ಅನೇಕ ಬಗೆಯ ಸಾಧನೆಗಳನ್ನು ಮಾಡುತ್ತಿದ್ದರಷ್ಟೆ. ಅವುಗಳಲ್ಲಿ 'ಮನೋಲಯ ಸಾಧನೆಯೂ ಒಂದು. ಈ ಸಾಧನೆಯಲ್ಲಿ ನಾಲ್ಕು ಮೆಟ್ಟಿಲುಗಳುಂಟು. ಮೂರು ಮತ್ತು ನಾಲ್ಕನೆಯ ಮೆಟ್ಟಿಲುಗಳಲ್ಲಿ ಶ್ಯಾಮ ಮತ್ತು ನೀಲಿವರ್ಣಗಳು ಸಂತರಿಗೆ ಕಾಣಿಸುತ್ತವೆ. ಮಹಾರಾಷ್ಟ್ರದ ಸಂತ ಜನಾಬಾಯಿ ತನಗೆ ಕಾಣಿಸಿಕೊಂಡ ಬಣ್ಣಗಳನ್ನು ತನ್ನೊಂದು ಓವಿಯಲ್ಲಿ 'ಮಧ್ಯೇ ಶೂನ್ಯ ಶ್ಯಾಮವರ್ಣ, ಮಹಾಶೂನ್ಯ ನೀಲವರ್ಣಾ' ಎಂದು ಹಾಡಿದ್ದಾಳೆ. ಇದು ಸಾಧನೆಯ ತೂರ್ಯಸ್ಥಳಗಳನ್ನು ಸೂಚಿಸುತ್ತದೆ.

ಫ್ಲಾರೆನ್ಸಿನ ಗ್ಯಾಲರಿಯಲ್ಲಿರುವ ಕ್ರಿಸ್ತಮಾತೆಯ ಚಿತ್ರವು ಲೋಕಕಾರುಣ್ಯವನ್ನು ಪ್ರತಿನಿಧಿಸುತ್ತದೆ. ಇದಕ್ಕೆ ತಕ್ಕಂತೆ 'ಮಂದನೀಲಿಯ ಹಸುರುಕಾಂತಿ'ಯು ಚಿತ್ರಕ್ಕೆ ಬಳಸಲಾಗಿದೆ. ಮಂದನೀಲಿಯಲ್ಲಿ ದೈವದ ಸಂಸ್ಪರ್ಶವಿದ್ದರೆ; ಹಸುರಿನಲ್ಲಿ ಮಾನುಷಸಂಸ್ಪರ್ಶತೆಯ ಚೆಲ್ಲುವರಿದಿದೆ. ಭೂಮಿಯು ಹಸುರನ್ನು ಹೊದ್ದಿದೆ. ಆಕಾಶವು ನೀಲಿಯನ್ನು ಹೊದ್ದಿದೆ. ಇದು ಪ್ರಾಕೃತಿಕ ವಿಸ್ಮಯವಾದರೂ ಕವಿ, ಕಲಾವಿದ ಮತ್ತು ಅಧ್ಯಾತ್ಮ ಸಾಧಕರಿಗೆ ಇವು ಕೇವಲ ಬಣ್ಣಗಳಲ್ಲ; ಸಾಧನೆ ಹಾಗೂ ಸಿದ್ಧಿಗಳ ಕುರುಹು. ಬೇಂದ್ರೆ–ಕುವೆಂಪು–ಪುತಿನ ಅವರ ಕವಿತೆಗಳಲ್ಲಿ ಹಸುರು ಮತ್ತು ನೀಲಿ ಬಣ್ಣಗಳ ವರ್ಣನೆಗಳು ಬಂದಿವೆ. ಡಿವಿಜಿ ಅವರು 'ವಸಂತ ಕುಸುಮಾಂಜಲಿ'ಯಲ್ಲಿ 'ನೀಲಪಟದಿ ಚಿತ್ರಿಸಿರ್ಪ ಚಿತ್ರಚತುರನಾರ್?' ಎಂದು ವಿಸ್ಮಯ–ಬೆರಗುಗಳಿಂದ ಕೇಳಿದ್ದಾರೆ. ನೀಲಿ–ಹಸುರು ಬಣ್ಣಗಳು ನೆಲ–ಮುಗಿಲಿನ ವರ್ಣಕೌತುಕವನ್ನು ನಮಗೆ ತಿಳಿಸುತ್ತವೆ. ಕ್ರಿಸ್ತಮಾತೆಯ ಈ ಭವ್ಯಚಿತ್ರವು ಲೋಕಾಲೋಕಗಳ ದಿವ್ಯತೆಯನ್ನು ಸಾರುತ್ತ ನಮ್ಮನ್ನು ಸೆಳೆಯುತ್ತಿದೆ.

■ **ಪುರಂಜೀವಿ**

## ಮಾತೇ ಮುತ್ತು

- ಅಧಿಕಾರದ ಬಹುದೊಡ್ಡ ಸಮಸ್ಯೆ ಎಂದರೆ ಅಧಿಕಾರದಲ್ಲಿ ಇರುವವರನ್ನು ಜವಾಬ್ದಾರಿಯುತವಾಗಿ, ಸಾರ್ವಜನಿಕರಿಗೆ ಉಪಯುಕ್ತ ಆಗುವ ರೀತಿ ಬಳಸುವಂತೆ ಮಾಡುವುದು.

  —ರಾಬರ್ಟ್ ಕೆನಡಿ

- ಜಗತ್ತಲ್ಲದಿದ್ದರೂ ಅದರಂತೆಯೇ ಒಂದು ರೂಪ ಸೃಷ್ಟಿಯಲ್ಲಿ ವಿಹರಿಸುವುದೇ ಸ್ವಪ್ನ. ಸ್ವಪ್ನವೂ ಒಂದು ಚಿತ್ರದ ವೃತ್ತಿ.

  —ದ.ರಾ. ಬೇಂದ್ರೆ

- ಸಂತೋಷದ ಕಟ್ಟೆ ಒಡೆದಾಗ ಆಸೆಗಳ ಪ್ರವಾಹ ಕೋಡಿ ಹರಿಯುತ್ತದೆ.

  —ಪ್ರೇಮ್‌ಚಂದ್

- ಕೆಲವರ ಮೇಲೆ ಅಧಿಕಾರವು ಬಲು ಹಗುರವಾಗಿ ಕೂತಿರುತ್ತದೆ. ಕೆಲವರಿಗೆ ಅಧಿಕಾರ ಕಳೆದುಕೊಳ್ಳುವುದೆಂದರೆ ಬಲು ದುಃಖವಾಗುತ್ತದೆ.

  —ಪಿ.ವಿ. ನರಸಿಂಹರಾವ್

- ಅನುಭವ ಒಳ್ಳೆಯ ಶಾಲೆಯಾದರೂ ಶುಲ್ಕ ಮಾತ್ರ ದುಬಾರಿ.

  —ಹೇನ್ರಿಕ್ ಹೀನ್

- ಎಂಥ ಸಾಮಾನ್ಯರಿಗೂ ಅನುಭವವೆಂಬುದು ಸಾಮ್ರಾಟನ ಸೊಕ್ಕು ಕೊಡುತ್ತದೆ.

  —ರಂ.ಶ್ರೀ. ಮುಗಳಿ

- ಇತಿಹಾಸದಿಂದ ಮಾನವ ಜನಾಂಗ ಏನನ್ನೂ ಕಲಿಯುವುದಿಲ್ಲ.

  —ಹೇಗಲ್